**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ, ಹೊಸದುರ್ಗ.**

ಕ್ರಿ.ಮಿಸ್.ಸಂಖ್ಯೆಃ **405/2021** ದಿನಾಂಕಃ **11.09.2025**

ಆರ್ .ಡಬ್ಲೂಃ **1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀಮತಿ ಎಲ್ ಎಂ ಹೆಚ್ ವಕೀಲರಿಂದ**

1. ಅರ್ಜಿದಾರರು ಈ ಪ್ರಕರಣವನ್ನು ಜೀವನಾಂಶ ಕೋರಿ ದಾಖಲಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ, ಕಾರಣ ನಾನು ಅನಕ್ಷರಸ್ಥ. ನಾನು ಅರ್ಜಿದಾರರಿಗೆ ಸಂಬಂಧಿಕರಾಗಬೇಕು. ಅಂದರೆ ನನಗೆ ವರಸೆಯಲ್ಲಿ ಅಕ್ಕನ ಮಗಳಾಗಬೇಕು. ನನ್ನ ಮತ್ತು ಅರ್ಜಿದಾರರ ವಿವಾಹವಾಗಿ 10 ವರ್ಷಗಳಾಗಿರುತ್ತದೆ. ವಿವಾಹದ ಸಮಯದಲ್ಲಿ ನನಗೆ 33-34 ವರ್ಷ ವಯಸ್ಸಾಗಿತ್ತು. ಅರ್ಜಿದಾರರಿಗೆ ಸುಮಾರು 18-19 ವರ್ಷ ವಯಸ್ಸಾಗಿತ್ತು. ನನ್ನ ಮತ್ತು ಅರ್ಜಿದಾರರ ನಡುವೆ 18 ವರ್ಷ ವಯಸ್ಸಿನ ಅಂತರ ಇರುತ್ತದೆ. ವಿವಾಹದ ನಂತರ 7-8 ವರ್ಷ ಜೊತೆಯಲ್ಲಿ ಇದ್ದೆವು.

2. ಅರ್ಜಿದಾರರ ತಾಯಿಯ ಹೆಸರು ಚಂದ್ರಮ್ಮ . ಅವರು ಮಾಡದಕೆರೆಯಲ್ಲಿ ವಾಸ ಇದ್ದರು. ಅವರು ಮರಣ ಹೊಂದಿದ 1 ತಿಂಗಳ ನಂತರ ನನ್ನ ಮತ್ತು ಅರ್ಜಿದಾರರ ವಿವಾಹ ಆಗಿರುತ್ತದೆ. ಸದರಿ ಚಂದ್ರಮ್ಮ ದಿಃ 24.03.2014 ರಂದು ಮರಣ ಹೊಂದಿದ್ದು ಅದರ 2-3 ತಿಂಗಳ ನಂತರ ನಮ್ಮ ವಿವಾಹ ಆಗಿರುತ್ತದೆ. ಚಂದ್ರಮ್ಮನಿಗೆ ಸೇರಿದ ಸುಮಾರು 30 ಕುರಿಗಳು ಇದ್ದವು ಎಂದರೆ ಸರಿ. ನಂತರ ನಾನು ಮತ್ತು ವೀರನಾಗಪ್ಪ ಇಬ್ಬರು ಸದರಿ ಕುರಿಗಳನ್ನು ಮಾರಾಟ ಮಾಡಿ ಮದುವೆ ಸಮಯದಲ್ಲಿ ಅರ್ಜಿದಾರರಿಗೆ ಚಿನ್ನ ಮತ್ತು ವಜ್ರದ ಆಭರಣಗಳನ್ನು ಮಾಡಿಸಿ ಉಳಿದ ಮೊತ್ತದಲ್ಲಿ ವಿವಾಹ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

3. ವಿವಾಹದ ಮೊದಲು ವಿವಾಹ ಆಗುವ ವಿಷಯವನ್ನು ನಾನು ಅರ್ಜಿದಾರರಿಗೆ ತಿಳಿಸಿರಲಿಲ್ಲ ಎಂದರೆ ಸರಿ . ನಾನು , ವೀರನಾಗಪ್ಪ ಮತ್ತು ನನ್ನ ಸಹೋದರರು ಅರ್ಜಿದಾರರನ್ನು ಹಾಲುರಾಮೇಶ್ವರ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಯಾವುದೇ ಪೂರ್ವ ಯೋಜನೆ ಮಾಡದೇ ವಿವಾಹ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಅರ್ಜಿದಾರರು ವಿವಾಹ ತನಗೆ ಇಷ್ಟ ಇಲ್ಲ ಎಂದು ತಿಳಿಸಿದರೂ ವಿವಾಹ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಂದ್ರಮ್ಮನಿಗೆ ಪಂಚಾಯತಿ ವತಿಯಿಂದ ಮನೆ ಮಂಜೂರಾತಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಂಜೂರಾತಿಯಾದ ಮನೆಯಲ್ಲಿ ಅರ್ಜಿದಾರರು ವಾಸಿಸುತ್ತಿರುತ್ತಾರೆ ಎಂದರೆ ಸರಿ. ಅರ್ಜಿದಾರರ ಅಕ್ಕ ಪ್ರಮೀಳಾ ರವರ ವಿವಾಹ ಅವರ ತಾಯಿ ಚಂದ್ರಮ್ಮ ಜೀವಿತ ಕಾಲದಲ್ಲಿ ಆಗಿರುತ್ತದೆ ಎಂದರೆ ಸರಿ . ನಾನು ಅರ್ಜಿದಾರರಿಗೆ ಜೀವನಕ್ಕೆ ಬೇರೆ ವ್ಯವಸ್ಥೆ ಮಾಡಿರುವುದಿಲ್ಲ . ಸಾಕ್ಷಿ ತಾನು ಜೊತೆಯಾಗಿ ಇರಲು ಹಲವು ಬಾರಿ ಕರೆದರು ಅರ್ಜಿದಾರರು ಬೇರೆಯವರ ಜೊತೆ ವಾಸಿಸುವ ಸಲುವಾಗಿ ನನ್ನ ಜೊತೆ ಬಂದಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ.

4. ಅರ್ಜಿದಾರರು ತನ್ನ ಮಗಳೊಂದಿಗೆ ಸದರಿ ಮನೆಯಲ್ಲಿ ವಾಸ ಇರುತ್ತಾರೆ ಎಂದರೆ ಸರಿ . ಪ್ರಸ್ತುತ 2 ನೇ ಅರ್ಜಿದಾರರ ವಿದ್ಯಾಭ್ಯಾಸದ ಖರ್ಚನ್ನು 1 ನೇ ಅರ್ಜಿದಾರರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನಗೆ ಸೇರಿದ ಸ್ವಂತ ಮನೆ ಇರುತ್ತದೆ , 3 ಎಕರೆ ಜಮೀನು ನಾನು ಸಾಗುವಳಿ ಮಾಡುತ್ತಿದ್ದು , ಅದು ಅರ್ಜಿದಾರರ ಮಾವನ ಹೆಸರಿನಲ್ಲಿ ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ನೇ ಅರ್ಜಿದಾರರಿಗೆ ಮತ್ತು ಮಲ್ಲಿಕಾ ಎಂಬ ಗಂಡಸಿನೊಂದಿಗೆ ಸಂಬಂಧ ಇಟ್ಟುಕೊಂಡು ನನ್ನನ್ನು ನಿರ್ಲಕ್ಷಿಸಿರುತ್ತಾಳೆ ಎಂದು ಅಕೆಗೆ ಜೀವನಾಂಶ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

5. ದಿಃ 02.09.2021 ರಂದು ನಾನು , ವೀರನಾಗಪ್ಪ ನನ್ನ ತಮ್ಮಂದಿರಾದ ಯೋಗೇಶ್ವರ ಮತ್ತು ನರಸಿಂಹ 1 ನೇ ಅರ್ಜಿದಾರರಿಗೆ ಹಲ್ಲೆ

ಮಾಡಿ ಮನೆಯಿಂದ ಹೊರಗೆ ಹಾಕಿರುತ್ತೇವೆ ಎಂದರೆ ಸುಳ್ಳು. 1 ನೇ ಅರ್ಜಿದಾರರ ಮೇಲೆ ಹಲ್ಲೆ ಮಾಡಿರುತ್ತೀರಾ ಎಂದರೆ ಸಾಕ್ಷಿ 1 ನೇ ಅರ್ಜಿದಾರರು ಮತ್ತು ಸದರಿ ಮಲ್ಲಿಕಾ ಒಟ್ಟಾಗಿ ದೊರೆತ ಕಾರಣ ಬುದ್ದಿವಾದ ಹೇಳಲು ಹಲ್ಲೆ ಮಾಡಿರುತ್ತೇವೆ ಎನ್ನುತ್ತಾರೆ. ಆ ರೀತಿ ಒಟ್ಟಾಗಿ ಸಿಕ್ಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ವೀರನಾಗಪ್ಪ ಮತ್ತು ನನ್ನ ಸಹೋದರರ ಮಾತನ್ನು ಕೇಳಿಕೊಂಡು ದುಶ್ಚಟಗಳಿಗೆ ಬಲಿಯಾಗಿ ಅರ್ಜಿದಾರರಿಗೆ ಪದೇ ಪದೇ ಹಲ್ಲೆ ಮಾಡಿರುತ್ತೇನೆ ಎಂದರೆ ಸುಳ್ಳು .

6. ನಾನು ಅರ್ಜಿದಾರರಿಂದ ನನ್ನ ತಂಗಿಯ ಗಂಡನಾದ ವಿಜಯಪ್ಪರಿಗೆ 50,000/- ರೂಪಾಯಿ ನಗದು ಮತ್ತು ಕಿವಿ ಓಲೆ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ . ಅರ್ಜಿದಾರರು ಅದನ್ನು ಕೂಲಿ ಮಾಡಿಗಳಿಸಿದ ಹಣ , ವಡವೆ ಆಗಿದ್ದು ಅವರಿಂದ ಅದನ್ನುವಾಪಸ್ ಕೇಳಿದ ಕಾರಣ ಅರ್ಜಿದಾರರ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅರ್ಜಿದಾರರ ತಂದೆ ಮನೆಯ ಆಸ್ತಿಯ ವಿವರಗಳ ಬಗ್ಗೆ ಮಾಹಿತಿ ಇಲ್ಲ. 1 ನೇ ಅರ್ಜಿದಾರರು ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡಿ 6 ರಿಂದ 8 ಸಾವಿರ ರೂಪಾಯಿ ದುಡಿಮೆ ಮಾಡುತ್ತಿದ್ದಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ . ನನಗೆ ಉತ್ತಮ ಆದಾಯ ಇದ್ದು , ಅರ್ಜಿದಾರರಿಗೆ ಜೀವನಾಂಶ ಕೊಡುವ ಬಾದ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.